ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನಲ್ಲಿ ಜೂನಿಯರ್ ಇಂಜಿನಿಯರ್ ನೇಮಕಾತಿಯ ಬಗ್ಗೆ

೨೫೪೩. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನಲ್ಲಿ ಮಂಜೂರಾಗಿರುವ ಕಿರಿಯ ಇಂಜಿನಿಯರ್ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಜಿಲ್ಲೆಯಲ್ಲಿರುವ ಮಂಡಲಕ್ಕೆ ಕಿರಿಯ ಇಂಜಿನಿಯರ್‌ರವರನ್ನು ನೇಮಕ ಮಾಡಲು ಸರ್ಕಾರದವರು ಕ್ರಮಕೈಕೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ೭೭ (ಎಪ್ಪತ್ತೇಳು)

ಆ) ಆರ್ಥಿಕ ಹೊರೆ ಬೀಳುವುದರಿಂದ ಪ್ರತಿ ಮಂಡಲಕ್ಕೆ ಕಿರಿಯ ಇಂಜಿನೀಯರ್ ಹುದ್ದೆಯನ್ನು ಸೃಜಿಸಲು ಸಾಧ್ಯವಿಲ್ಲ.

ಮಂಡಲ ಪಂಚಾಯಿತಿ ಕಾರ್ಯದರ್ಶಿಗಳ ನೇಮಕಾತಿಯ ಬಗ್ಗೆ

೨೫೪೭. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಮಂಡಲ ಪಂಚಾಯಿತಿ ಕಾರ್ಯಾಲಯಗಳಲ್ಲಿ ಖಾಲಿ ಇರುವ ಕಾರ್ಯದರ್ಶಿ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೪೭

ಆ) ರಾಜ್ಯದಲ್ಲಿರುವ ೨೪೯ ಮಂಡಲ ಪಂಚಾಯ್ತಿಗಳಿಗೂ ಕಾರ್ಯದರ್ಶಿಗಳನ್ನು ಈಗಾಗಲೇ ನೇಮಕ ಮಾಡಲಾಗಿದೆ. ಆದರೆ ಈ ಕಾರ್ಯದರ್ಶಿಗಳಲ್ಲಿ ಕೆಲವರು ಸೇವಾ ನಿವೃತ್ತಿ ಹೊಂದುತ್ತಿರುವುದರಿಂದಲೂ, ಕೆಲವರು ಸ್ವಯಂ ನಿವೃತ್ತಿ ಹೊಂದುತ್ತಿರುವುದರಿಂದಲೂ, ಮತ್ತು ಕೆಲವರು ವ್ಯೆತ ಪಟ್ಟಿರುವುದರಿಂದಲೂ ಸ್ಥಾನಗಳು ಖಾಲಿ ಆಗುತ್ತಲಿವೆ. ಈ ರೀತಿ ಖಾಲಿ ಆದಂತೆಲ್ಲಾ ಈ ಸ್ಥಾನಗಳನ್ನು ತುಂಬಲು ಅಗತ್ಯವಾದ ನೌಕರರನ್ನು ತನ್ನ ಇಲಾಖೆಯಿಂದ ನಿಯೋಜಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ. ಆ ಇಲಾಖೆಯು ತನ್ನ ನೌಕರರನ್ನು ನಿಯೋಜಿಸಿದಂತೆಲ್ಲ ಈ ಹುದ್ದೆಗಳನ್ನು ತುಂಬಲಾಗುತ್ತಿದೆ.